Agricultural Seed Farms for Ragi and Paddy that have been started in Bangalore and Kolar Districts.

*Q.—806. Sri B. CHANNABYRE GOWDA (Hoskote).—

Will the Government be pleased to state:—

(*a*) the number of agricultural seed farms for Ragi and Paddy that have been started in Bangalore and Kolar Districts;

(*b*) the number of acres of land belong to each Farm;

(*c*) the amount that is being spent by Government on each Farm for the past three years?

A.—Sri H. C. BORAIAH (Parliamentary Secretary to the Minister for Agriculture).—

(*a*) The number of Agricultural Seed Farms for Ragi are 2 in Bangalore District? and 3 in Kolar District. There are no Agricultural Seed Farms in these Districts for paddy.

(*b*) The area of the Farms in Bangalore District is:—

		As.Gs.
1. Chandurayanahally	...	30-20
2. Hessarghatta	...	40-00

and the area of farms in Kolar District is:—

1. Burudugunte	...	52-07
2. Chickkadasarahalli	...	33-00
3. Varadahally.	...	50-00

(*c*) The amount that is being spent by Government on each Farm for the past 3 years is given in the statement given below.

STATEMENT

Showing the details of Expenditure in respect of seed farms.

Sl. No.	Year	Pay	D.A.	T.A.	O.A.	Contingencies	Cost of land	Irrigation	Seed Stores	Quarters	Equipment	Bullocks	Cattle feed	Cultivation charges	Total
1	2	3	4	5	6	7	8	9	10	11	12	13	14	15	16
							Chandurayanahally								
1	1960—61 ...	3,303	1,590	181	...	303	...	...	..	6,407	....	...	898	3,001	15,683
2	1961—62 ...	4,021	1,695	256	...	910	...	1,021	808	7,768	...	...	287	4,484	28,450
3	1962—63 ...	5,115	758	228	...	625	...	4,080	2,455	270	...	...	250	2,787	16,548
							Hessarghatta								
1	1960—61 ...	1,280	889	347	...	175	4,970	...	...	...	675	..	692	...	8,978
2	1961—62 ...	2,863	1,124	523	...	682	...	...	...	...	...	...	995	8,178	14,370
3	1962—63 ...	2,682	340	445	...	665	...	...	...	...	...	...	700	3,738	8,470
							Burudugunte								
1	1960—61 ...	2,776	1,600	373	...	853	385	..	..	...	289	...	767	5,357	10,400
2	1961—62 ...	3,680	1,320	371	...	799	...	.	...		..	...	689	3,805	10,664
3	1962—63 ...	4,705	600	324	...	518	...	...	...	8,770	...	...	87	2,634	17,638
							Chickkadasarahalli								
1	1960—61 ...	3,325	1,560	110	...	361	82	...	...	...	356	...	1,164	3,560	10,518
2	1961—62 ...	4,721	1,365	65	...	272	...	...	..		...	...	524	4,165	11,112
3	1962—63 ...	4,929	560	71	...	242	...	...	3,682	7.237	...	...	151	2,032	18,904
							Varadahally								
1	1960—61 ...	2,366	1,500	111	...	819	...	...	...	...	245	...	1,458	4,799	11,898
2	1961—62 ...	3,305	1,245	64	...	1,264	...	...	...	...	...	...	180	5,461	11,519
3	1962—63 ...	3,981	480	130	...	215	...	984	...	2,847	...	...	76	2.951	11,614

ಶ್ರೀ ಬಿ. ಚನ್ನಬೈರೇಗೌಡ.—ತಃಖ್ತೆಯಲ್ಲಿ 5 ಸೀಡ್ ಫಾರಂಗಳು ಇವೆ ಎಂದು ಹೇಳಿದ್ದೀರಿ ಈ ಫಾರಂಗಳಲ್ಲಿ ಎಷ್ಟು ಬಿತ್ತನೆ ರಾಗಿಯನ್ನು ಬೆಳೆದು ರೈತರಿಗೆ ಹಂಚಿದ್ದೀರಿ ?

ಶ್ರೀ ಎಚ್. ಸಿ. ಬೋರಯ್ಯ.—ಬುರಡುಗುಂಟೆಯಲ್ಲಿ 8 ಬಂಗಾಳಿ ಮಣ.—1960-61ರಲ್ಲಿ ಉತ್ಪತ್ತಿಯಾಗಿದೆ. ಇನ್ನೊಂದು ಕಡೆ 3 ಬಂಗಾಳಿ ಮಣ ಉತ್ಪತ್ತಿಯಾಗಿದೆ. ಅದರಲ್ಲಿ ಜೊಳ್ಳು ಇತ್ಯಾದಿಗಳನ್ನು ತೆಗೆದು ಉಳಿದುದನ್ನೆಲ್ಲ ರೈತರಿಗೆ ಹಂಚಿದ್ದೇವೆ.

ಶ್ರೀ ಬಿ. ಚನ್ನಬೈರೇಗೌಡ.—ನಾನು ಕೇಳಿದ್ದು ಎಷ್ಟು ಪಲ್ಲ ಉತ್ಪತ್ತಿಮಾಡಿದಿರಿ ಎಂದು ?

Mr. SPEAKER.—If the hon'ble member has got the figures and if the statement is lenghtly, he may pass on the same later on.

ಶ್ರೀ ಬಿ. ಚನ್ನಬೈರೆಗೌಡ.—ಒಂದೊಂದು ಫಾರಂಗೂ ಕಳೆದ ಮೂರು ವರ್ಷಗಳಿಂದ 20 ಲಕ್ಷ ರೂಪಾಯಿ ಖರ್ಚಾಗಿದೆ. ಉತ್ಪತ್ತಿ ಎಷ್ಟಾಯಿತು ಎಂದು ಕೇಳಬೇಡವೆ ?

ಶ್ರೀ ಎಚ್. ಸಿ. ಬೋರಯ್ಯ.—ಚಂದೂರಾಯನಹಳ್ಳಿಯಲ್ಲಿ 1960–61ರಲ್ಲಿ 2506 ರೂ. ಗಳೂ 61–62ರಲ್ಲಿ 3,740 ರೂ.ಗಳೂ, 62-63ರಲ್ಲಿ 2,843 ರೂ.ಗಳೂ ಬೆಲೆ ಬಾಳತಕ್ಕ ಬಿತ್ತನೆ ಬೀಜ ಗಳು ಉತ್ಪನ್ನವಾಗಿವೆ. ಹಾಗೇ ಹೆಸರುಘಟ್ಟ ಫಾರಂನಲ್ಲಿ 61–62ರಲ್ಲಿ ಏನೂ ಉತ್ಪತ್ತಿ ಆಗಲಿಲ್ಲ. ಕಾರಣ ಅಲ್ಲಿ ಭೂಮಿಯನ್ನು ಸಮಮಾಡಿಕೊಳ್ಳುವುದು ಇಂಥ ಕೆಲಸಗಳಿದ್ದುದರಿಂದ ಬೆಳೆ ಆಗಲಿಲ್ಲ. ಇನ್ನು 1962-63ರಲ್ಲಿ 5,914 ರೂ.ಗಳ ಮತ್ತು 62–63ರಲ್ಲಿ 6,813 ರೂ.ಗಳ ಬೆಲೆಬಾಳತಕ್ಕ ಬಿತ್ತನೆ ಬೀಜವನ್ನು ಉತ್ಪನ್ನಮಾಡಲಾಗಿದೆ. ಇನ್ನು ಬುಡಗುಂಜೆ ಫಾರಂನಲ್ಲಿ-60-61ರಲ್ಲಿ 1,813 ರೂ.ಗಳು, 61-62ರಲ್ಲಿ 2,016 ರೂ.ಗಳೂ, 62-63ರಲ್ಲಿ 2,195 ರೂ.ಗಳ ಬೆಲೆಬಾಳತಕ್ಕ ಬೀಜದ ರಾಗಿಯನ್ನು ಉತ್ಪತ್ತಿ ಮಾಡಲಾಗಿದೆ. ಚಿಕ್ಕದಾನವಹಳ್ಳಿ ಫಾರಂನಲ್ಲಿ—60-61ರಲ್ಲಿ 1,217 ರೂ, 61-62ರಲ್ಲಿ 1,616 ರೂ, 62-63ರಲ್ಲಿ 1,986 ರೂ.ಗಳ ಬೆಲೆ ಬಾಳತಕ್ಕ ಬಿತ್ತನೆ ಬೀಜವನ್ನು ಉತ್ಪತ್ತಿಮಾಡಲಾಗಿದೆ. ಹೀಗೆ ವರದಾಹಳ್ಳಿ ಫಾರಂನಲ್ಲೂ—1960-61ರಲ್ಲಿ 3,999 ರೂ, 61–62ರಲ್ಲಿ 5,857 ರೂ, 62-63ರಲ್ಲಿ 2,862 ರೂ.ಗಳ ಬೆಲೆಬಾಳತಕ್ಕ ಬಿತ್ತನೆ ಬೀಜಗಳನ್ನು ಉತ್ಪತ್ತಿಮಾಡಲಾಗಿದೆ.

ಶ್ರೀ ಕೆ. ಲಕ್ಕಪ್ಪ.—ಈ ಸ್ಕೀಮನ್ನು ಬೇರೆ ಕಡೆ ಮಾಡತಕ್ಕ ಯೋಜನೆ ಇದೆಯೆ ?

ಶ್ರೀ ಎಚ್. ಸಿ. ಬೋರಯ್ಯ.—ಇದಕ್ಕೆ ಪ್ರತ್ಯೇಕ ಪ್ರಶ್ನೆ ತನ್ನಿ, ಉತ್ತರ ಒದಗಿಸಲಾಗುತ್ತದೆ.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಒಂದು ಪಲ್ಲ ಬೀಜದ ರಾಗಿಗೆ ಬೆಲೆಯೇನು ಬಿತ್ತು ?

ಶ್ರೀ ಎಚ್. ಸಿ. ಬೋರಯ್ಯ.—ಇದರಲ್ಲಿ ನಮಗೆ ಲಾಭ ನಷ್ಟದ ಪ್ರಶ್ನೆ ಬರುವುದಿಲ್ಲ.

ಶ್ರೀ ಇ. ನಾರಾಯಣಗೌಡ.—ವರದಾಹಳ್ಳಿ ಫಾರಂನಲ್ಲಿ 50 ಎಕರೆ ಭೂಮಿ ಇದ್ದರೂ ಕೇವಲ ಜಲ್ಲ ಬೇಸಾಯಕ್ಕೆ ಬೆಳೆಸುತ್ತಿರುವ ಜಮೀನು 5 ಎಕರೆ ಮಾತ್ರ ಅಲ್ಲವೆ ?

ಶ್ರೀ ಎಚ್. ಸಿ. ಬೋರಯ್ಯ.—5 ಎಕರೆ ಎಂದು ಹೇಳಿದ್ದನ್ನು ನಾನು ಒಪ್ಪುವುದಿಲ್ಲ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಚಿಕ್ಕದಾನರಹಳ್ಳಿ ಫಾರಂನಲ್ಲಿ ದನಗಳೆಷ್ಟಿವೆ ?

ಶ್ರೀ ಎಚ್. ಸಿ. ಬೋರಯ್ಯ.—ಅಲ್ಲಿಗೆ ಎಷ್ಟು ಎತ್ತುಗಳು ಬೇಕೋ ಅಷ್ಟನ್ನು ಇಟ್ಟು ಕೊಂಡಿದ್ದೇವೆ.

ಶ್ರೀ ಟಿ. ಜಿ. ನತ್ಯನಾರಾಯಣ.—ಬಿತ್ತವನ್ನೂ ಇಲ್ಲಿ ಬೆಳೆಯುತ್ತೀರಾ ?

ಶ್ರೀ ಎಚ್. ಸಿ. ಬೋರಯ್ಯ.—ಬೇರೆ ಪ್ರಶ್ನೆ ತನ್ನಿ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ 5 ಬಿತ್ತನೆ ಫಾರಂಗಳಲ್ಲಿ ಇರತಕ್ಕ ಸುಮಾರು 225 ಚಿಲ್ಲರೆ ಎಕರೆಗಳಲ್ಲಿ ಎಷ್ಟು ಬಿತ್ತನೆ ರಾಗಿಯನ್ನು ಬೆಳೆಯಲಾಯಿತು ? ಖರ್ಚೆಷ್ಟಾಯಿತು ?

ಶ್ರೀ ಎಚ್. ಸಿ. ಬೋರಯ್ಯ.—ದೊಡ್ಡ ಪಟ್ಟಿಯಿದೆ.

Mr. SPEAKER.—If it is a long list, I request him to supply a copy later on to the Hon'ble Member.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಚಂದೂರಾಯನಹಳ್ಳಿಯಲ್ಲಿ ಯಾವ ಜಾತಿ ರಾಗಿ ಬೆಳೆಯುತ್ತಿದ್ದೀರಿ ?

ಶ್ರೀ ಎಚ್. ಸಿ. ಬೋರಯ್ಯ.—ಆ ವಿವರ ನನ್ನಲ್ಲಿಲ್ಲ.

ಶ್ರೀ ಕೆ. ಪಿ. ರೇವಣ ಸಿದ್ಧಪ್ಪ.—ಒಂದು ಪಲ್ಲ ರಾಗಿಗಾಗಲೀ ಅಥವಾ ಒಂದು ಸೇರು ರಾಗಿ ಬೆಳೆಯುವುದಕ್ಕಾಗಲಿ ಏನು ಖರ್ಚು ಬೀಳಬಹುದು ಎನ್ನುವುದನ್ನು ಹೇಳುವುದಕ್ಕಾಗುತ್ತದೆಯೇ ?

ಶ್ರೀ ಹೆಚ್. ಸಿ. ಬೋರಯ್ಯ.—ಇದರ ವಿವರಗಳನ್ನು ಆಗಲೇ ತಿಳಿಸಿದೆ. ಅದರಂತೆ ತಾವೇ ಲೆಕ್ಕ ಹಾಕಿಕೊಳ್ಳಬಹುದು.

ಶ್ರೀ ಇ. ನಾರಾಯಣಗೌಡ.—ಸೀಡು ಫಾರಂಗಳನ್ನು ಮಾಡುವಾಗ ಜಮೀನುಗಳನ್ನು ಪೂರ್ತಿಯಾಗಿ ಉಪಯೋಗಿಸಿಕೊಳ್ಳದೆ ಕೆಲವು ಭಾಗದಲ್ಲಿ ಮಾತ್ರ ರಾಗಿಯನ್ನು ಬೆಳೆಯುತ್ತಿರುವುದರಿಂದ ಸರ್ಕಾರಕ್ಕೆ ನಷ್ಟವಾಗುತ್ತಿದೆ ಎನ್ನುವುದನ್ನು ಒಪ್ಪಿಕೊಳ್ಳುತ್ತೀರಾ ?

ಶ್ರೀ ಎಚ್. ಸಿ. ಬೋರಯ್ಯ.—ಇಲ್ಲ. ಸರ್ಕಾರದವರು ಬಂಜರು ಭೂಮಿಗಳನ್ನು ತೆಗೆದು ಕೊಂಡು ಅದನ್ನು ಲಾಯಕ್ಕಾಗಿ ಮಾಡಲು ಹನನು ಮಾಡುತ್ತಿದ್ದೇವೆ.

ಶ್ರೀ ಅಂದಾನಯ್ಯ.—ಐದು ಸೀಡು ಫಾರಂಗಳಿಂದಲೂ ಪ್ರತಿ ವರ್ಷವೂ ಎಷ್ಟು ಬೀಜಗಳನ್ನು ರೈತರಿಗೆ ಹಂಚಿದ್ದೀರಿ ?

ಶ್ರೀ ಎಚ್. ಸಿ. ಬೋರಯ್ಯ.—ವಿವರಗಳು ಇಲ್ಲ. ನೋಟೀಸು ಬೇಕು.

Mr. SPEAKER.—I request the Hon'ble Minister to refer to page 14, col. 13. That column is blank. Column 14 is food for cattle without any mention about bullocks. There is some slight discrepency.

ಶ್ರೀ ಎಚ್. ಸಿ. ಬೋರಯ್ಯ.—ಎತ್ತುಗಳನ್ನು ಮೊದಲೇ ಕೊಂಡುಕೊಳ್ಳಲಾಗಿದೆ.

Mr. SPEAKER.—So, there were cattle purchased before ; so, it is not an item of expenditure ; then, it is perfectly all right.

ಶ್ರೀ ಬಿ. ಚನ್ನಬೈರೇಗೌಡ.—ಈ ಫಾರಂಗಳಿಗಾಗಿ ಇಲ್ಲಿ ಕೊಟ್ಟಿರುವ ವಿವರದಂತೆ ಸುಮಾರು 39, 40 ಸಾವಿರ ರೂಪಾಯಿಗಳಷ್ಟು ಪ್ರತಿಯೊಂದು ಫಾರಂಗೂ ಖರ್ಚಾಗುತ್ತಿರುವುದರಿಂದ ಈ ಸರಕಾರಿ ಫಾರಂಗಳನ್ನು ಪೂರ್ತಿಯಾಗಿ ರೈತರಿಗೇ ಕೊಟ್ಟು ವ್ಯವಸಾಯ ಇರಾಖೆಯವರ ಮೂಲಕ ಬೀಜಗಳನ್ನು ಹಂಚುವ ಏರ್ಪಾಡು ಮಾಡುತ್ತೀರಾ ?

ಶ್ರೀ ಎಚ್. ಸಿ. ಬೋರಯ್ಯ.—ಇದು ಅವರ ಅಭಿಪ್ರಾಯ, ಪರಿಶೀಲನೆ ಮಾಡೋಣ.

ಶ್ರೀ ಎ. ಕೃಷ್ಣಶೆಟ್ಟಿ.—ಈ ಫಾರಂಗಳಲ್ಲಿ ಅಗ್ರಿಕಲ್‌ಚರ್ ಡಿಪಾರ್ಟುಮೆಂಟಿನಿಂದ ಅನುಭವ ವಿಲ್ಲದವರನ್ನು ನೇಮಿಸಿದರೆ ಕೃಷಿಯಲ್ಲಿ ಅಭಿವೃದ್ಧಿ ಮಾಡಿದಂತಾಗುತ್ತದೆಯೇ ?

ಶ್ರೀ ಎಚ್. ಸಿ. ಬೋರಯ್ಯ.—ಅಂತಹ ಉದ್ದೇಶವೇನೂ ಇಲ್ಲ. ವ್ಯವಸಾಯವನ್ನು ಉತ್ತಮ ಪಡಿಸಬೇಕು ಎನ್ನುವ ದೃಷ್ಟಿಯಿಂದ ಇದನ್ನು ಮಾಡಿರತಕ್ಕದ್ದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಫಾರಂಗಳಲ್ಲಿ ಯಾವ ಯಾವ ಹೊಸ ರಾಗಿ ತಳಿಗಳನ್ನು ಬೆಳೆಯುವುದಕ್ಕೆ ಏರ್ಪಾಡು ಮಾಡಿದ್ದೀರಿ ?

ಶ್ರೀ ಎಚ್. ಸಿ. ಬೋರಯ್ಯ.—ಅದರ ವಿವರಗಳು ಈಗ ನನ್ನಲ್ಲಿಲ್ಲ.

Sri G. V. GOWDA.—What is the number of bullocks there during this year and the expenditure incurred for them ?

Sri H. C. BORIAH.—I want notice.

ಶ್ರೀ ಬಿ. ಚನ್ನಬೈರೇಗೌಡ.—ಫಾರಂಗಳನ್ನು ತೆಗೆದಿರುವ ಉದ್ದೇಶ ರೈತರಿಗೆ ಹೆಚ್ಚಿನ ಸಹಾಯ ಮಾಡಬೇಕು ಎಂದು, ಹಾಗಾಗಿದೆ ಉದ್ದೇಶಕ್ಕೆ ಲಕ್ಷಾಂತರ ರೂಪಾಯಿಗಳಷ್ಟು ನಷ್ಟವಾಗುತ್ತಿರುವುದರಿಂದ ಇದನ್ನು ಮುಚ್ಚಲು ಏನಾದರೂ ಏರ್ಪಾಡು ಮಾಡುತ್ತೀರಾ ?

ಶ್ರೀ ಎಚ್. ಸಿ. ಬೋರಯ್ಯ.—ಇದು ಮಾನ್ಯ ಸದಸ್ಯರ ಅಭಿಪ್ರಾಯ. ರೈತರಿಗೆ ಇದರಿಂದ ಒಳ್ಳೆಯದಾಗಬೇಕು ಎಂದು ಇವನ್ನು ತೆರೆದು ಅವರನ್ನು ಮುಂದೆ ತರಲು ಸರ್ವ ಪ್ರಯತ್ನವನ್ನೂ ಮಾಡುತ್ತಿದ್ದೇವೆ.

ಶ್ರೀ ಎಸ್. ಎಂ. ಗುರ್ರೆಡ್ಡಿ.—ಸೀಡು ಫಾರಂಗಳನ್ನು ತೆರೆಯುವುದರ ಮುಖ್ಯ ಉದ್ದೇಶ ರೈತರಿಗೆ ಉತ್ತಮವಾದ ಬೀಜಗಳನ್ನು ದೊರಕಿಸಿಕೊಡುವುದಕ್ಕೋ ಇಲ್ಲ ಲಾಭವನ್ನು ತೆಗೆಯಲಿಕ್ಕೋ ?

ಶ್ರೀ ಎಚ್. ಸಿ. ಬೋರಯ್ಯ.—ರೈತರಿಗೆ ಉತ್ತಮವಾದ ಬೀಜಗಳನ್ನು ಒದಗಿಸುವುದ ಕ್ಕಾಗಿಯೇ ಈ ನಾಲ್ಕು ಫಾರಂಗಳನ್ನು ತೆಗೆದಿರುವುದು.

ಶ್ರೀ ಜಿ. ರಾಮೇಗೌಡ.— ಈ ಫಾರಂಗಳಲ್ಲಿ ಯಾವ ಯಾವ ಹೊಸ ಮಾದರಿಯ ವ್ಯವಸಾಯೋ ಪಕರಣಗಳನ್ನು ಉಪಯೋಗಿಸುತ್ತಿದ್ದೀರಿ ?

ಶ್ರೀ ಎಚ್. ಸಿ. ಬೋರಯ್ಯ.—ನನ್ನಲ್ಲಿ ವಿವರಗಳಿಲ್ಲ.

ಶ್ರೀ ಕೆ. ವಿ. ಬೈರೇಗೌಡ —ಹೆಸರುಘಟ್ಟ ಫಾರಂನಲ್ಲ ಇದುವರೆಗೆ ಆಗಿರತಕ್ಕ ಬತ್ತನೆಯ ಭತ್ತ, ರಾಗಿಗಳನ್ನು ಕೆಲವು ತಾಲ್ಲೂಕುಗಳಲ್ಲಿ ಮತ್ತು ಜಿಲ್ಲೆಗಳಲ್ಲಿ ಹಂಚುತ್ತಿಲ್ಲವೇ ?

ಶ್ರೀ ಎನ್. ಸಿ. ಬೋರಯ್ಯ.—ಹಂಚಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಉತ್ತರದಲ್ಲಿ ಹೇಳಿರುವಂತೆ ಬುರಡಗುಂಟೆ ಫಾರಂನಲ್ಲಿ 52 ಎಕರೆಗಳಷ್ಟು ಭೂಮಿಯನ್ನು ಸಾಗು ಮಾಡಲು ಎಷ್ಟು ಹಣ ಖರ್ಚಾಯಿತು ?

ಶ್ರೀ ಎಚ್. ಸಿ. ಬೋರಯ್ಯ.—ಒಟ್ಟಿನಲ್ಲಿ ಫಾರಂಗಾಗಿ ಹಣ ಖರ್ಚಾಗಿದ್ದರೂ ನಿಖರವಾಗಿ ಇಷ್ಟೇ ಎಕರೆ ಎಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಒಂದು ಪಲ್ಲಾ ರಾಗಿಗೆ ಸುಮಾರು 400 ರೂಪಾಯಿಗಳಷ್ಟು ಎಂದಾದರೆ ಅದೇ ರೀತಿ ವ್ಯವಸಾಯ ಮಾಡಲು ರೈತರಿಗೆ ಏನಾಗುತ್ತದೆ ?

†ಶ್ರೀ ಎಸ್. ನಿಜಲಿಂಗಪ್ಪ.—ಮುಖ್ಯಮಂತ್ರಿಗಳು ಇಲ್ಲಿ ಕೇಳುತ್ತಿರುವ ಪ್ರಶ್ನೆಗಳನ್ನು ನೋಡಿದರೆ ಒಂದು ಪಲ್ಲ ದವನಕ್ಕೆಷ್ಟು, ಒಂದು ಸೇರಿಗೆಷ್ಟು ಎನ್ನುವ ಪ್ರಶ್ನೆಗಳು ಬರುತ್ತಿವೆ. ಇದು ವ್ಯವಸಾಯವನ್ನು ಉತ್ತಮಮಾಡುವುದಕ್ಕಾಗಿ ಯಾವ ಯಾವ ಪ್ರದೇಶದಲ್ಲಿ ಎಂತಹ ನೀರಿದೆ, ಯಾವ ರೀತಿಯ ಗೊಬ್ಬರ ಹಾಕಿದರೆ ಯಾವ ತರಹದ ಬೆಳೆ ಬರಬಹುದು ಎನ್ನುವುದನ್ನು ಪ್ರಯೋಗ ಮಾಡಿ ನೋಡುವುದಕ್ಕಾಗಿ ಡೆಮಾನ್ ಸ್ಟ್ರೇಷನ್ ಫಾರಂಗಳು ಮತ್ತು ಆಡ್ಮಿನಿಸ್ಟ್ರೇಷನ್ ಫಾರಂಗಳೆಂದು ಮಾಡಿ ದೇಶದಲ್ಲಿರುವ ರೈತರಿಗೆ ಯಾವ ರೀತಿಯಾಗಿ ಉತ್ತಮ ಬೆಳೆಯನ್ನು ಮಾಡಬಹುದು ಎನ್ನುವುದನ್ನು ಕಂಡುಹಿಡಿಯುವುದಕ್ಕಾಗಿ ಮತ್ತು ರೈತನನ್ನು ಆಯಾ ಪ್ರದೇಶಗಳಿಗೆ ಕರೆದುಕೊಂಡು ಹೋಗಿ ತೋರಿಸುವುದಕ್ಕಾಗಿ ಮತ್ತು ಪ್ರಯೋಗ ಮಾಡುವುದಕ್ಕೋಸ್ಕರ ಇಂತಹ ಫಾರಂಗಳು ಇರುವುದು. ಇಲ್ಲಿ ಒಂದು ಎಕರೆಗೆ ಸಾವಿರ ರೂಪಾಯಿಗಳಾಯಿತು ಎಂದು ಇಂತಹ ಪ್ರಯೋಗ ಸ್ಥಳದಲ್ಲಿ ಲೆಕ್ಕ ಹಾಕುವುದು ಸರಿಯಲ್ಲ.

ಶ್ರೀ ಎಸ್. ಶಿವಪ್ಪ.—ಪ್ರಾಯೋಗಿಕವಾಗಿ ಮಾಡಿರುವ ಈ ಫಾರಂಗಳಲ್ಲಿ ಉತ್ಪತ್ತಿಯಾದ ರಾಗಿಯ ಬೆಳೆಯಲ್ಲಿ ಎಷ್ಟುಮಟ್ಟಿಗೆ ಹೆಚ್ಚಾಗಿದೆ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಎಚ್. ಸಿ. ಬೋರಯ್ಯ.—ಉತ್ತಮವಾದ ಬೀಜಗಳನ್ನು ತೆಗೆದು ರೈತರಿಗೆ ಕೊಡಲು ಇಲ್ಲಿ ಏರ್ಪಾಡು ಮಾಡಲಾಗಿದೆ. ಆದರೆ ಎಷ್ಟಾಗಿದೆ ಎನ್ನುವ ವಿವರಗಳ ಲೆಕ್ಕ ಈಗ ಸಿಕ್ಕುವುದಿಲ್ಲ.

1-00 P.M.

Estimated Cost of Gurpur Irrigation Scheme in Mangalore Taluk, South Kanara District.

*Q.—815. Sri A. KRISHNA SHETTY (Mangalore-II).—

Will the Government be pleased to state :—

(*a*) the estimated cost of the Gurpur Irrigation Scheme in Mangalore Taluk, South Kanara District ;

(*b*) the actual expenditure incurred for the work so far ;

(*c*) the agency (departmental or contract) through which the work was executed ;

(*d*) whether the work would be completed as per record and schedule ;

(*e*) what was the proposed acreage that would have been irrigated under the scheme and the actual extent under irrigation ;

(*f*) how many acres of land have been acquired under the scheme and what is the amount so far paid for acquisition ?

*A.—Sri ALUR HANUMANTHAAPA (Deputy Minister for Minor Irrigation).—

(*a*) Revised estimated cost is Rs. 15,86,000.

(*b*) Rs. 11,94,497.

(*c*) Contract basis.